**ಸಾಕ್ಷಿಯನ್ನು ದಿಃ 14.06.2023 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.**

ಪಾಟೀ ಸವಾಲುಃ ವಾದಿಪರ ಶ್ರೀ.ಕೆ.ಎಂ.ವಿ. ವಕೀಲರಿಂದಃ

ನಾನು ಹುಟ್ಟಿ ಬೆಳೆದಿರುವುದು ಭತ್ತೆಗೌಡನೂರು ಗ್ರಾಮವಾಗಿರುತ್ತದೆ. ದಾವಾಸ್ವತ್ತುಗಳ ಮಾಹಿತಿ ನನಗೆ ಇರುತ್ತದೆ. ವಾದಿ ರೇಣುಕಾ ರವರು ಈ ಪ್ರಕರಣವನ್ನು ನಮ್ಮ ವಿರುದ್ದ ಸಲ್ಲಿಸಿರುತ್ತಾರೆ. ಅವರು ವಿಭಾಗಾಂಶ ಪರಿಹಾರ ಕೋರಿ ಈ ದಾವೆ ತಂದಿರುತ್ತಾರೆ. 2011 ರಿಂದ ಈ ಪ್ರಕರಣ ಚಾಲ್ತಿಯಲ್ಲಿರುವ ಬಗ್ಗೆ ನನಗೆ ಗೊತ್ತಿರುತ್ತದೆ. ವಾದಿ 3 ರವರು 2 ನೇ ಪ್ರತಿವಾದಿಯ ಹೆಂಡತಿ ಎಂದರೆ ಸರಿ. ವಾದಿ 1 ಮತ್ತು 2 ರವರು 2 ನೇ ಪ್ರತಿವಾದಿಯ ಮಕ್ಕಳು ಎಂದರೆ ಸರಿ. ಸಾಕ್ಷಿ ಮುಂದುವರೆದು 3 ನೇ ವಾದಿಯು 2 ನೇ ಪ್ರತಿವಾದಿಯ 2 ನೇ ಪತ್ನಿ ಎಂದು ತಿಳಿಸುತ್ತಾರೆ. 3 ನೇ ವಾದಿಯು 2 ನೇ ಪ್ರತಿವಾದಿಯ 2 ನೇ ಪತ್ನಿ ಎಂದು ನನ್ನ ಪ್ರತಿವಾದಪತ್ರದಲ್ಲಿ ತಿಳಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ 3 ನೇ ವಾದಿಯು 2 ನೇ ಪ್ರತಿವಾದಿಯ 2 ನೇ ಪತ್ನಿ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಯನ್ನು ಕೊಟ್ಟಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿಯ ಮೊದಲನೇ ಹೆಂಡತಿ ಮತ್ತು ಅವರ ಮಕ್ಕಳ ಬಗ್ಗೆ ಯಾವುದೇ ದಾಖಲಾತಿ ಕೊಟ್ಟಿಲ್ಲ ಎಂದರೆ ಸರಿ.

ದಾವಾಸ್ವತ್ತುಗಳು 1 ಮತ್ತು 2 ನೇ ಪ್ರತಿವಾದಿಗಳ ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿ. ದಾವಾ ಐಟಂ ನಂ. 4 ರ ಸ್ವತ್ತನ್ನು ಹೊರತು ಪಡಿಸಿ ಉಳಿದ ಸ್ವತ್ತುಗಳಲ್ಲಿ ವಾದಿಯರಿಗೆ ಹಕ್ಕು ಇರುತ್ತದೆ. ದಾವಾ ಐಟಂ ನಂ. 4 ರ ಸ್ವತ್ತು ಸಹಾ 1 ಮತ್ತು 2 ನೇ ಪ್ರತಿವಾದಿಗಳ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ದಾವಾ ಐಟಂನಂ. 4 ಸ್ವತ್ತು ನನ್ನ ತಂದೆಯಿಂದ ನನಗೆ ಬಂದಿರುತ್ತದೆ. ನಿಡಿ 4 ದಾನಪತ್ರವನ್ನು ಈ ಪ್ರಕರಣ ಬಾಕಿ ಇದ್ದ ಸಮಯಲ್ಲಿ ಮಾಡಿಕೊಂಡಿದ್ದೇವೆ ಎಂದರೆ ಸರಿ. ಸದರಿ ದಾನಪತ್ರವನ್ನು ವಾದಿಗಳಿಗೆ ಮೋಸ ಮಾಡಲು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ ನಿಡಿ 4 ರ ದಾನಪತ್ರಕ್ಕೆ ಅಮರೇಶ್ ಮತ್ತು ಉಮೇಶ್ ರವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ.

ದಾವಾ ಐಟಂ ನಂ. 4 ರ ಸ್ವತ್ತಿನಲ್ಲಿ ವಾದಿಗಳಿಗೆ ಭಾಗಾಂಶ ಕೊಡಬೇಕಾಗುತ್ತದೆ ಎಂಬ ಕಾರಣಕ್ಕೆ ನಾನು ಮತ್ತು ನನ್ನ ತಂದೆ ಸೇರಿ ನಿಡಿ 4 ರ ದಾನಪತ್ರವನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಪತ್ರವು ವಾದಿಯರನ್ನು ಬದ್ದಪಡಿಸುವುದಿಲ್ಲ ಎಂದರೆ ಸರಿಯಲ್ಲ.

ಈಗ ತೋರಿಸಿದ ಪೋಟೋಗಳಲ್ಲಿ ಕಾಣುವ ಮನೆ ದಾವಾ ಐಟಂ ನಂ 3 ರಲ್ಲಿ ನಿರ್ಮಾಣ ಮಾಡಲಾಗಿರುತ್ತದೆ ಎಂದರೆ ಸರಿ. ಸದರಿ ಪೋಟೋಗಳನ್ನು ನಿಪಿ 20 ರಿಂದ 22 ಎಂದು ಗುರುತಿಸಲಾಯಿತು. ಸದರಿ ಮನೆಯನ್ನು ಕಟ್ಟಿ 30 ವರ್ಷಗಳಾಗಿದೆ ಎಂದರೆ ಸರಿಯಲ್ಲ. ಸುಮಾರು 12 ವರ್ಷಗಳ ಹಿಂದೆ ಸದರಿ ಮನೆಯನ್ನು ನಿರ್ಮಾಣಮಾಡಲಾಗಿರುತ್ತದೆ. ಒಟ್ಟು ಕುಟುಂಬದ ಆದಾಯದಿಂದ ಸದರಿ ಮನೆಯನ್ನು ನಿರ್ಮಾಣಮಾಡಲಾಗಿದೆ ಎಂದರೆ ಸರಿಯಲ್ಲ. ಸದರಿ ಮನೆಯನ್ನು ಯಾವಾಗ ನಿರ್ಮಾಣ ಮಾಡಲಾಗಿದೆ ಎಂದು ಈ ಸಂಬಂಧ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ಸದರಿ ಸ್ವತ್ತುಗಳಲ್ಲಿ ವಾದಿಯರಿಗೆ ಭಾಗಾಂಶ ಇರುತ್ತದೆ ಎಂದರೆ ಸರಿಯಲ್ಲ. ಈಗ ತೋರಿಸಿದ ಪೋಟೋದಲ್ಲಿ ಕಾಣುವ ಮನೆಯಲ್ಲಿ ವಾದಿಗಳು ವಾಸವಿರುತ್ತಾರೆ ಎಂದರೆ ಸರಿ. ಸದರಿ ಪೋಟೋವನ್ನು ನಿಪಿ 23 ಎಂದು ಗುರುತಿಸಲಾಯಿತು. ಎಲ್ಲಾ ಆಸ್ತಿಗಳಲ್ಲಿಯೂ ವಾದಿಯರಿಗೆ ಸಮಾನ ಭಾಗಾಂಶದ ಹಕ್ಕು ಇದೆ ಎಂದರೆ ಸರಿಯಲ್ಲ. ನಾನು ಸುಳ್ಳು ತಕಾರಾರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಕೇಶವಮೂರ್ತಿ.ಬಿ)**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**

ಬಂಗಾರಪೇಟೆ